Crl. Misc.520/2023

P.w.-1

**ಸಾಕ್ಷಿಯನ್ನು ದಿನಾಂಕಃ 28-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರ ಪರ ವಕೀಲರಿಂದ**

ನನಗೆ ಈಗ 83 ವರ್ಷ ವಯಸ್ಸಾಗಿರುವುದು. ಈ ದಿನ ನನ್ನೊಂದಿಗೆ ನ್ಯಾಯಾಲಯಕ್ಕೆ ನನ್ನ ಮಗಳಾದ ಸುಶೀಲ ಬಂದಿರುವಳು. ನಾನು ಕರೆದರೆ ನನ್ನ ಇನ್ನಿಬ್ಬರೂ ಮಕ್ಕಳಾದ ಪ್ರೇಮಾ ಮತ್ತು ಸುಮಲತಾ ಬರುವರು ಅಂದರೆ ಸರಿ. ಅವರು ನನ್ನೊಂದಿಗೆ ಅನ್ಯೋನ್ಯವಾಗಿದ್ದಾರೆ ಅಂದರೆ ಸರಿಯಲ್ಲ. ನಾನು ಹಾಗೂ ನನ್ನ ಯಮಾನರು ಸೇರಿಕೊಂಡು ಸರ್ವೆ ನಂ 418/ಎ 1 ಎಕರೆ 80 ಸೆನ್ಸ ಗೆ ಸಂಬಂದಿಸಿದಂತೆ ಕ್ರಯ ಪತ್ರವನ್ನು ನನ್ನ ಮಗಳದ ಪ್ರೇಮಾಳಿಗೆ ಬರೆದುಕೊಟ್ಟಿದ್ದೇವೆ ಅಂದರೆ ನನಗೆ ಗೊ ತ್ತಿಲ್ಲ. ಅದೇ ರೀತಿ ಸರ್ವೆ ನಂ 85 ರಲ್ಲಿ 2 ಎಕರೆ 15 ಸೆನ್ಸ ಜಮೀನನ್ನು ನಾವು ಪ್ರೇಮಳಿಗೆ ದಾನ ಪತ್ರ ಮಾಡಿ ಕೊಟ್ಟಿರುವೆವು ಅಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ನನ್ನ ಗಂಡ ಒಂದು ಮನೆಯನ್ನು ಪ್ರೇಮಾಳ ಗಂಡನಾದ ಜಯಪ್ಪನ ಹೆಸರಿಗೆ ಮಾಡಿದ್ದೇವೆ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ 85 ರ ಪೈಕಿ 2 ½ ಎಕರೆಗೆ ಜಮೀನಿಗೆ ಸಂಬಂದಿಸಿದಂತೆ ಪ್ರೇಮಳ ಹೆಸರಿಗೆ ದಾನ ಪತ್ರ ಮಾಡಿ ಕೊಟ್ಟಿದೇವೆ ಅಂದರೆ ನನಗೆ ಗೊತ್ತಿಲ್ಲ. ನಾನು ಎದುರುದಾರನು ಹಾಕಿರುವ ತಕರಾರುಗಳನ್ನು ತಿಳಿದುಕೊಂಡಿರುವುದಿಲ್ಲ. OS No. 151/2023 ರಲ್ಲಿ ಮೇಲೆ ಹೇಳಿದ ಕ್ರಯ ಪತ್ರ ಮತ್ತು ದಾನ ಪತ್ರಗಳಲ್ಲಿ ಕಾಣಿಸಿರುವ ಅಸ್ತಿಗಳನ್ನು ಸೇರಿಸಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಹೆಣ್ಣುಮಕ್ಕಳ ವಿರುದ್ದ ಜೀವನಾಂಶ ಪರಿಹಾರವನ್ನು ಕೇಳಿರುವುದಿಲ್ಲ. ಹೆಣ್ಣುಮಕ್ಕಳ ಬಳಿ ನಾನು ಜೀವನಾಂಶ ಕೇಳಲು ನಾನು ತಯಾರಿರುವುದಿಲ್ಲ. ನಾನು ಕಂಚಿಕೇರಿಯಲ್ಲಿ ವಾಸವಿದ್ದೇನೆ ಅಂದರೆ ಸರಿ. ನನನಪ್ರತಿನಿತ್ಯದ ಕರ್ಚನ್ನು ಅಂದರೆ ಊಟ ಹಾಗೂ ಬಟ್ಟೆಯ ಕರ್ಚನ್ನು ಎದುರುದಾರ ನೋಡಿಕೊಳ್ಳುತ್ತಿದ್ದಾನೆ ಅಂದರೆ ಸರಿಯಲ್ಲ. ನನಗೆ ವೈಯಸ್ಸಾಗಿರುವ ಕಾರಣ ಎದುರುದಾರ ಹಾಗೂ ಆತನ ಹೆಂಡತಿಯೇ ನನ್ನನ್ನು ನೋಡಿಕೊಳ್ಳುತ್ತಿರುವರು ಅಂದರೆ ಸರಿಯಲ್ಲ. ಶಿವಕುಮಾರ ವ್ಯವಸಾಯ/ಕೂಲಿ ಕೆಲಸಕ್ಕೆ ಹೋಗುವನು ಅಂದರೆ ನನಗೆ ಗೊತ್ತಿಲ್ಲ. ಎದುರುದಾರನ ಹೆಂಡತಿಯ ಹೆಸರು ವಿದ್ಯಾ ಅಂದರೆ ಸರಿ. ವಿದ್ಯಾ ತನ್ನ ಸಂಬಂದಿಕರ ಮನೆಗೆ ಕೆಲಸಕ್ಕೆ ಹೋಗುವಳು ಅಂದರೆ ನನಗೆ ಗೊತ್ತಿಲ್ಲ. ಶಿವಕುಮಾರನ ಮಗನ ಹೆಸರು ಪ್ರತಾಪ ರೆಡ್ಡಿ ಇರುವನು. ಆತನು ವಿದ್ಯಾಭ್ಯಾಸ ಮಾಡುತ್ತಿರುವನು. ಆತ ಏನು ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. ಶಿವಕುಮಾರ ಮತ್ತು ವಿದ್ಯಾ ತಮ್ಮ ಕೂಲಿ ಕೆಲಸದಿಂದ ಬಂದ ಅದಾಯದಿಂದ ಮಗನನ್ನು ಓದಿಸಬೇಕು ಅಂದರೆ ನನಗೆ ಗೊತ್ತಿಲ್ಲ. ನಾನು ಎಸಿ ನ್ಯಾಯಾಲಯದಲ್ಲಿ ಹಿರಿಯ ನಾಗರೀಕರ ರಕ್ಷಣಾ ಕಾಯ್ದಿ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದ್ದೆನು ಅಂದರೆ ಸರಿ. ಅದು ವಿಚಾರಣೆಯಾಗಿ ವಜಾ ಆಯಿತು ಅಂದರೆ ಸಾಕ್ಷಿಯು ಅಲ್ಲಿಂದ ನಾನು ಈ ನ್ಯಾಯಾಲಯಕ್ಕೆ ಬಂದಿರುವೆನು ಎಂದು ನುಡಿದಿರುತ್ತಾರೆ. ಅಲ್ಲಿ ನನ್ನ ಪರವಾಗಿ ಹಾಜರಾಗಿರುವ ವಕೀಲರ ಹೆಸರೇನೆಂದರೆ ಸಾಕ್ಷಿಯು ಮೌನ ವಹಿಸುವರು. ನನ್ನ ಹೆಣ್ಣುಮಕ್ಕಳು ಪ್ರಚೋದಿಸಿದ ಕಾರಣ ನಾನು ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಅಂದರೆ ನನಗೆ ಗೊತ್ತಿಲ್ಲ. ನಾನು ಪ್ರಚೋದನೆ ಮಾಡಿ ಹೆಣ್ಣು ಮಕ್ಕಳ ಮುಖಾಂತರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೆನು ಅಂದರೆ ಸರಿಯಲ್ಲ. ಸರ್ವೆ ನಂ 171/ಎ ವಿಸ್ತೀರ್ಣ 3 ಎಕರೆ 2 ಸೆನ್ಸ

ಜಮೀನನ್ನು ಜಿ.ಹಾಲೇಶ ತಂದೆ ಮರಳು ಸಿದ್ದಪ್ಪ ಇವರು ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಅದನ್ನು ಯಾರು ಸಾಗುವಳಿ ಮಾಡುತ್ತಿರುವರು ಎಂದು ನನಗೆ ಗೊತ್ತಿಲ್ಲ. ಈ ವರ್ಷ ಅಲ್ಲಿ ಯಾವ ಬೆಳೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಜಮೀನನ್ನು ಸದರಿ ಹಾಲೇಶನಿಗೆ ಗುತ್ತಿಗೆಗೆ ಕೊಟ್ಟು ಹಣವನ್ನು ಪಡೆಯುತ್ತಿದ್ದೇನೆ ಅಂದರೆ ಸರಿಯಲ್ಲ. ಶಿವಕುಮಾರನ ಅರೋಗ್ಯ ಸರಿ ಇರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಆತನಿಗೆ ದುಡಿಯುವ ಶಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ಆತನಿಗೆ ಎಷಲ್ಟು ಆದಾಯ ಇರುವುದು ಎಂದು ನನಗೆ ಗೊತ್ತಿರುವುದಿಲ್ಲ. ಆತನಿಗೆ ತಿಂಗಳಿಗೆ ಕೇವಲ 2-3 ಸಾವಿರದಷ್ಟು ಆದಾಯ ಇರುವುದು ಅಂದರೆ ನನಗೆ ಗೊತ್ತಿಲ್ಲ. ನಾವು ಎಲ್ಲಾ ಪಿತ್ರಾರ್ಜಿತ ಅಸ್ತಿಗಳನ್ನು ಹೆಣ್ಣು ಮಕ್ಕಳ ಅಸ್ತಿಗಳಿಂದ ಎದುರುದಾರನಿಗೆ ಯಾವುದೇ ಆದಾಯ ಇರುವುದಿಲ್ಲ ಅಂದರೆ ಸರಿಯಲ್ಲ. ಆತನಿಗೆ ನನಗ ಜೀವನಾಂಶ ಕೊಡುವಷ್ಟು ಆದಾಯ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ. ಹೇ ಕೇ ಸರಿಯಿದೆ.**

28-06-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**